**ಮೊದಲನೇ ಅಪರ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಕನಕಪುರ.**

CC No. 124/2018

CW -8 PW - 4

| | | |
|---|---|---|
| ಹೆಸರು | ः | ಡಾ.ಕವಿತಾ |
| ಗಂಡನ ಹೆಸರು | ः | ಬಸವರಾಜು |
| ವಯಸ್ಸು | ः | 50 ವರ್ಷ |
| ಉದ್ಯೋಗ | ः | ವೈದ್ಯಾಧಿಕಾರಿಗಳು |
| ವಾಸ | ः | ಬೆಂಗಳೂರು |

ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ः ಮಾನ್ಯ ಎಪಿಪಿ ಯವರಿಂದ ः ದಿನಾಂಕ 28.03.2024

ನಾನು ದಿ:29.04.2016 ರಿಂದ 17.09.2018 ರವರೆಗೆ ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ತಜ್ಞ ವೈದ್ಯರಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ:26.03.2017 ರಂದು ರಾತ್ರಿ 10 ಗಂಟೆ ಸಮಯಕ್ಕೆ ಚಾಸಾ-2 ರವರು ಕೆಎಸ್ ಆರ್ ಟಿ ಸಿ ಬಸ್ ನಂ.ಕೆಎ-40-ಎಫ್-66 ಬಸ್ಸಿನ ಚಾಲಕ ಅದನ್ನು ವೇಗವಾಗಿ ಚಲಾಯಿಸಿದ ಕಾರಣ ಹಾಗೂ ಹಂಪ್ ನ್ನು ಗಮನಿಸದ ಕಾರಣ ಅಪಘಾತವಾಗಿ ತನಗೆ ಗಾಯಗಳಾಗಿದ್ದು ಹೇಳಿ ಚಿಕಿತ್ಸೆಗಾಗಿ ಬಂದಿದ್ದ.

ಚಾಸಾ-2 ರವರಿಗೆ ಎದೆಯ ಎಡಭಾಗಕ್ಕೆ ತುಂಬಾ ನೋವು ಹಾಗೂ ಎಡಭಾಗದ ಕೈ ಎತ್ತುವಾಗ ನೋವಿದೆ ಎಂದು ಬಂದಿರುತ್ತಾರೆ. ಸದರಿ ಗಾಯಗಳನ್ನು ಪರಿಶೀಲಿಸಿ ಮೂಳೆ ಡಾಕ್ಟರ್ ಹತ್ತಿರ ಹೋಗುವಂತೆ ತಿಳಿಸಲಾಯಿತು.

ದಿ:27.03.2017 ರಿಂದ 03.04.2017 ರವರೆಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಾಸಾ-2 ರವರು ಒಳರೋಗಿಯಾಗಿ ಐಪಿ ನಂ. 59018 ದಾಖಲಾಗಿರುತ್ತಾರೆ. ಎಕ್ಸರೇ ವರದಿಯ ಪ್ರಕಾರ ಚಾಸಾ-2 ರವರ 5,6,7,8 ರಿಬ್ ನಲ್ಲಿ fracture ಇರುವುದಾಗಿ ಕಂಡು ಬಂತು. ಮೊದಲನೇ ಗಾಯ ತೀವ್ರ ಸ್ವರೂಪದ್ದು ಆಗಿದ್ದು, 2 ನೇ ಗಾಯ ಸಾಮಾನ್ಯ ಸ್ವರೂಪದ್ದು ಆಗಿರುತ್ತದೆ.

ಸಾಕ್ಷಿಯು ಚಾಸಾ-2 ರವರ ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು,

ಆದನ್ನು ನಿಪಿ-3 ಎಂದು ಆದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಆರೋಪಿ ಪರ ಶ್ರೀ ವಕೀಲರಿಂದಃ**

ನಿಪಿ-3 ರಲ್ಲಿ ಗಾಯದ ವಯಸ್ಸಿನ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿ ನೋವಿನ ಬಗ್ಗೆ ಆ ರೀತಿ ಯಾವುದೇ ಬರಹ ಬರೆಯುವುದಿಲ್ಲ ಎಂದು ನುಡಿಯುತ್ತಾರೆ. ಚಾಸಾ-2 ರವರು ಖುದ್ದಾಗಿ ಚಿಕಿತ್ಸೆ ಪಡೆಯಲು ಬಂದಿದ್ದರು, ಪೋಲೀಸರ ಮುಖಾಂತರ ಬಂದಿರಲಿಲ್ಲ. ಇಂತಹ ಗಾಯಗಳು ತಾವಾಗಿಯೇ ಬಿದ್ದಿದ್ದರೂ ಸಹ ಆಗುತ್ತವೆಂದರೆ ಸಾಕ್ಷಿ ಜೋರಾಗಿ ಬಿದ್ದಿದ್ದರೆ ಆಗುವ ಸಾಧ್ಯತೆ ಇರುತ್ತದೆಂದು ನುಡಿಯುತ್ತಾರೆ. ಚಾಸಾ-2 ರವರಿಗೆ ನಾನು ಹೇಳಿದಂತೆ ನೋವುಗಳು ಆಗಿರಲಿಲ್ಲ, ಈ ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ ಹೇ ಕೇ ಸ ಒ

ಮೊದಲನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕನಕಪುರ